ಶ್ರೀ ಎನ್. ಹುಚ್ಚಮಾಸ್ತಿಗೌಡ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊದಲನಿಂದಲೂ ಪ್ರಸಿದ್ಧಿಯಾಗಿ ಕಳ್ಳಬಟ್ಟಿ ಸಾರಾಯಿಯನ್ನು ಮಾರಾಟ ಮಾಡುತ್ತಿದ್ದಾರೆ. ಹಿಂದೆ ಅದರ ಸಂಖ್ಯೆ ಹಾಸ್ತಿಯಾಗಿ ಅನೇಕರ ಮೇಲೆ ತಾವು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ. ಈಗ ತಾವು ಈ ವಿಚಾರದಲ್ಲಿ ದುಷ್ಟರನ್ನು ರಕ್ಷಣೆ ಮಾಡಿ ಶಿಷ್ಟರನ್ನು ಶಿಕ್ಷೆ ಮಾಡತಕ್ಕಂಥ ನೀತಿಯನ್ನು ಅನುಸರಿಸುತ್ತಿದ್ದೀರಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಶಿಷ್ಟರನ್ನು ರಕ್ಷಿಸಿ, ದುಷ್ಟರನ್ನು ಶಿಕ್ಷಿಸುವುದು ನಮ್ಮ ಉದ್ದೇಶ.

ಶ್ರೀ ಬಾಪುಗೌಡ.—ಸೇಂದಿಗೆ ಒಂದು ವಿಧವಾದ ಔಷಧಿಯನ್ನು ಸೇರಿಸಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಒಂದು ವೇಳೆ ಅದು ಸರ್ಕಾರದ ಗಮನಕ್ಕೆ ಬಂದಿದ್ದರೆ ಆ ಬಗ್ಗೆ ಯಾವ ಕ್ರಮವನ್ನು ಸರ್ಕಾರದವರು ತೆಗೆದುಕೊಂಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಜನರಲ್ ಪ್ರಶ್ನೆ ಆಯಿತು. ಮಾನ್ಯ ಸದಸ್ಯರು ಹೇಳಿದ ವಿಚಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಷ್ಟೊಂದು ಇಲ್ಲ. ಕೆಲವು ಕಡೆ ಇಂಥಾ ದೂರು ಬಂದದ್ದು ನಿಜ. ಆ ಬಗ್ಗೆ ಸರ್ಕಾರದವರು ಸೂಕ್ತವಾದ ಕ್ರಮವನ್ನು ತೆಗೆದುಕೊಂಡಿದ್ದಾರೆ. ಕೆಲವು ಕಡೆ ಏನು ಹೇಳುತ್ತಾರೆ ಎಂದರೆ ಸೇಂದಿಗೆ ಯಾವುದೋ ಒಂದು ದ್ರವವನ್ನು ಸೇರಿಸಿದರೆ ಅದರಿಂದ ಅದನ್ನು ಕುಡಿದವರಿಗೆ ಒಂದು ತರಹ ಕಿಕ್ ಬರುತ್ತದೆ, ಅದ್ದರಿಂದ ಗಿರಾಕಿಗಳೇ ಅದನ್ನು ಬಯಸುತ್ತಾರೆ ಎಂದು ಅದ್ದರಿಂದ ಇದರ ಬಗ್ಗೆ ಸರ್ಕಾರದವರು ಸೂಕ್ತವಾಗಿ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಾರೆ.

Number of Government Ayurvedic Colleges in the State

185. Sri C. M. CHURCHIHALMTH (Mundargi).—

Will the Minister for Health be pleased to state :—

(*a*) the number of Government Ayurvedic Colleges in the State ;

(*b*) the places where they are existing ;

(*c*) the number of principals who served in the said colleges so far together with the names of principals who are working now (Detailed information may please be furnished) ;

(*d*) whether the Government has contemplated to appoint a separate director for Ayurveda ;

(*e*) whether it is a fact that some degrees of Shuddha Ayurveda have been included in integrated scheme ;

(*f*) if so, the reason for not including the integrated practitioners registered in Bombay during 1941 under that Scheme ;

(*g*) whether it has come to the notice of Government that the persons who have passed D. S. A. C., are being registered in the integrated list in Bombay State ?

Sri G. BASAVANNAPPA (Deputy Minister for Health).—

(*a*) Two.

(*b*) Mysore and Bangalore.

(*c*) From the date of starting the college in 1968 Dr. S. Venkatanarayana Rao was the principal of the Mysore Ayurvedic College. He

retired in May 1969. Now the said post is vacant. Dr. B. M. Sharma, Professor, is in additional charge of Prineipal's post. Dr S. N. Madhavaswamy is working as the Principal of Bangalore Ayurvedic College from the date of starting the college.

(*d*) No.

(*e*) No.

(*f*) Does not arise.

(*g*) No.

ಶ್ರೀ ಸಿ. ಎಂ. ಚುರ್ಚಿಹಾಳ್‌ಮಠ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಮೈಸೂರು ಮತ್ತು ಬೆಂಗಳೂರು ಪಟ್ಟಣಗಳಲ್ಲಿ ಸರ್ಕಾರಿ ಆಯುರ್ವೇದ ಕಾಲೇಜುಗಳು ಇವೆ ಎಂದು ಹೇಳಿದ್ದೀರಿ, ಹಾಗಾದರೆ ಇಂಥಾ ಆಯುರ್ವೇದ ಕಾಲೇಜುಗಳನ್ನು ಬೆಳಗಾವಿ, ಬಿಜಾಪುರ, ಅಥವಾ ಬಳ್ಳಾರಿ ಈ ಪ್ರದೇಶಗಳಲ್ಲಿ ತೆರೆಯುವ ಅವಶ್ಯಕತೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ತಿಳಿಸುತ್ತೀರಾ ?

† ಶ್ರೀ ಜಿ. ಬಸವಣ್ಣಪ್ಪ.—ಆಯುರ್ವೇದ ವಂಡಲಿಯವರು ಎಲ್ಲೆಲ್ಲಿ ಆಯುರ್ವೇದ ಕಾಲೇಜನ್ನು ಸ್ಥಾಪನೆ ಮಾಡಿದರೆ ಅವು ಬೆಳೆಯುವುದಕ್ಕೆ ಅವಕಾಶವಾಗುತ್ತದೆ ಎಂದು ತೀರ್ಮಾನ ಮಾಡಿದ್ದಾರೆ ಯೋ ಆ ರೀತಿ ಅಂಥಾ ಕಡೆ ಆಯುರ್ವೇದ ಕಾಲೇಜುಗಳನ್ನು ಸ್ಥಾಪನೆ ಮಾಡಲಾಗಿದೆ.

ಶ್ರೀ ಎಂ. ನಾಗಪ್ಪ.— ಸ್ವಾಮಿ, ಈಗಲಾದರೂ ಹೈದರಾಬಾದ್ ಕರ್ನಾಟಕ ಮತ್ತು ಬೊಂಬಾಯಿ ಕರ್ನಾಟಕದಲ್ಲಿ ಒಂದೊಂದು ಆಯುರ್ವೇದ ಕಾಲೇಜನ್ನು ಸ್ಥಾಪನೆ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಈಗಾಗಲೇ ಬಿಜಾಪುರ, ಉಡುಪಿ, ಬೆಳಗಾವ್, ಬಳ್ಳಾರಿ ಈ ನಾಲ್ಕು ಸ್ಥಳಗಳಲ್ಲಿ ಪ್ರೈವೇಟ್ ಆಯುರ್ವೇದ ಕಾಲೇಜುಗಳನ್ನು ಸ್ಥಾಪನೆ ಮಾಡಲು ಚೆಂಪರರಿ ಆಫಿಲಿಯೇಷನ್ ಕೊಟ್ಟಿದೆ. ಈ ಕಾಲೇಜುಗಳನ್ನು ಸ್ಥಾಪನೆ ಮಾಡುವುದಕ್ಕೆ ಏನೇನು ಕಂಡೀಷನ್‌ಗಳು ಇದೆಯೋ ಅವುಗಳನ್ನೆರ್ಲಾ ಫುಲ್‌ಫಿಲ್ ಮಾಡಿ ಮತ್ತೆ ಯಾರಾದರೂ ಅರ್ಜಿ ಹಾಕಿದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಸಿ. ಎಂ. ಚುರ್ಚಿಹಾಳ್‌ಮಠ.—ಈಗ ಮೈಸೂರು ಆಯುರ್ವೇದ ಕಾಲೇಜಿಗೆ ಒಬ್ಬರು ಇನ್‌ಚಾರ್ಜ್ ಪ್ರಿನ್ಸಿಪಾಲರನ್ನು ನೇಮಕ ಮಾಡಿದ್ದೇವೆ ಎಂದು ಹೇಳಿದ್ದೀರಿ. ಅಲ್ಲಿ ಇನ್‌ಚಾರ್ಜ್ ಪ್ರಿನ್ಸಿಪಾಲರನ್ನು ನೇಮಕ ಮಾಡಿರುವುದರಿಂದ ಅಲ್ಲಿನ ಕೆಲಸಕಾರ್ಯಗಳು ಕುಂಠಿತವಾಗಿವೆ. ಆದ್ದರಿಂದ ಆ ಆಯುರ್ವೇದ ಕಾಲೇಜಿಗೆ ಒಬ್ಬರು ಖಾಯಂ ಆದ ಪ್ರಿನ್ಸಿಪಾಲರನ್ನು ನೇಮಕ ಮಾಡಿ ಆ ಹುದ್ದೆಯನ್ನು ಹಾಗ್ರತೆಯಾಗಿ ಭರ್ತಿ ಮಾಡುವುದಕ್ಕೆ ಕ್ರಮವನ್ನು ಕೈಗೊಳ್ಳುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಆ ಹುದ್ದೆಯು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗಳು ಆಗುವುದು ಸ್ವಲ್ಪ ನಿಧಾನವಾದ್ದರಿಂದ ಅಲ್ಲಿಗೆ ಖಾಯಂ ಆದ ಪ್ರಿನ್ಸಿಪಾಲರನ್ನು ನೇಮಕಮಾಡುವುದಕ್ಕೆ ಅವಕಾಶವಾಗಲಿಲ್ಲ. ಈಗ ಅಲ್ಲಿ ಡಾ. ಬಿ. ಎಂ. ಶರ್ಮ ಎನ್ನುವವರು ಇನ್‌ಚಾರ್ಜ್ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಶ್ರೀ ಸಿದ್ಧಯ್ಯ ಕಾತಿಮಠ.—ಈ ನಮ್ಮ ರಾಜ್ಯದಲ್ಲಿರತಕ್ಕ ಆಯುರ್ವೇದ ಕಾಲೇಜುಗಳಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಓದುತ್ತಿದ್ದಾರೆ. ?

ಶ್ರೀ ಜಿ. ಬಸವಣ್ಣಪ್ಪ.—ಮೈಸೂರು ಆಯುರ್ವೇದ ಕಾಲೇಜಿನಲ್ಲಿ 25 ಜನ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಬೆಂಗಳೂರು 37 ಜನ ವಿದ್ಯಾರ್ಥಿಗಳು, ಉಡುಪಿ 18 ಜನ ವಿದ್ಯಾರ್ಥಿಗಳು, ಬಿಜಾಪುರ 17 ಜನ ವಿದ್ಯಾರ್ಥಿಗಳು, ಬೆಳಗಾವಿ 5 ಜನ ವಿದ್ಯಾರ್ಥಿಗಳು, ಬಳ್ಳಾರಿಯಲ್ಲಿ 16 ಜನ ವಿದ್ಯಾರ್ಥಿಗಳು ಓದುತ್ತಿದ್ದಾರೆ.

ಶ್ರೀ ಸಿ. ಎಂ. ಚುರ್ಚಿಹಾಳ್‌ಮಠ.—ಈ ಆಯುರ್ವೇದದಲ್ಲಿ ಶುದ್ಧ ಆಯುರ್ವೇದ ಇಂಟಿಗ್ರೇಟೆಡ್ ಮತ್ತು ಯುನಾನಿ ಎಂದು ಮೂರು ಭಾಗ ಇದೆ. ಶುದ್ಧ ಆಯುರ್ವೇದದ ಕೆಲವು ಪದವೀಧರರನ್ನು ಇಂಟಿಗ್ರೇಟೆಡ್ ಸ್ಕೀಂನಲ್ಲಿ ಸೇರಿಸಿರುವುದು ನಿಜವೇ ?

ಶ್ರೀ ಜಿ. ಬಸವಣ್ಣಪ್ಪ.—ರಿಜಿಸ್ಟರ್ ಮಾಡುವಾಗ ಇಂಟಗ್ರೇಟೆಡ್ ಸಿಸ್ಟಂನ ಆಯುರ್ವೇದ ಶುದ್ಧ ಆಯುರ್ವೇದ ಮತ್ತು ಯುನಾನಿ ಎಂದು ಮೂರು ವಿಧವಾಗಿ ರಿಜಿಸ್ಟರ್ ಮಾಡ ರಾಗುತ್ತದೆ. ಆದರೆ ಒಂದಕ್ಕೊಂದು ಕ್ಲಬ್ ಮಾಡಿಲ್ಲ.

1-30 P.M.

Construction of Dam across Markandeya river Near Sirur in Hukkeri Taluk

190. **Sri L. S. NAIK** (Gokak).—

Will the Chief Minister be pleased to state :—

(*a*) whether it is a fact that dam will be constructed across Markandeya river near Sirur village, Hukkeri Taluk and if so, the estimate of the same ;

(*b*) the number of Talukas that will be provided with water by constructing this dam and the extent of land that will be irrigated ;

(*c*) when the work will be commenced ;

(*d*) number of villages that will be submerged by construction of this dam ?

Sri D. PARAMESHWARAPPA (Deputy Minister for Major Irrigation and Electricity).—

(*a*) This Scheme is still under consideration.

(*b*), (*c*) and (*d*) Do not arise in view of reply to clause (*a*).

ಶ್ರೀ ಎಲ್. ಎಸ್. ನಾಯಕ್.—ಈ ಯೋಜನೆ ಇನ್ನೂ ಪರಿಶೀಲನೆಯ ಹಂತದಲ್ಲಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಆದರೆ ಈ ಯೋಜನೆ ಬಹಳ ದಿವಸಗಳಿಂದ ಬಾಕಿಯಾಗಿ ಉಳಿದಿದೆ. ಅದ್ದರಿಂದ ಇದನ್ನು ಆದಷ್ಟು ಜಾಗ್ರತೆ ಮಾಡುತ್ತೀವೆಂದು ಭರವಸೆ ಕೊಡುತ್ತೀರಾ ?

† ಶ್ರೀ ಡಿ. ಪರಮೇಶ್ವರಪ್ಪ.—ನರ್ಕಾರಕ್ಕೆ ಈ ನೀರಾವರಿ ಯೋಜನೆಗಳನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳಬೇಕೆಂಬ ಮನಸ್ಸು ಇದೆ. ಇದನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೇವೆ.

Disappearance of Oil Stock from Dharwar District Oil Seeds Processing Society Limited, Gadag

198. **Sri H. SIDDAVEERAAPA** (Harihar).—

Will the Minister for Development be pleased to state :—

(*a*) whether Government's attention has been drawn to a publication in "Vishal Karnatak" dated 12th November 1969 in respect of the administration of the Dharwar District Oil Seeds Processing Society Limited, Gadag ;